ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2276
2. ಸದಸ್ಯರ ಹೆಸರು : ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 21.03.2022
4. ಉತ್ತರಿಸಬೇಕಾದ ಸಚಿವರು : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹುಬ್ಬಳ್ಳಿ-ಧಾರವಾಡ ಅವಳಿ ನಗರದಲ್ಲಿ ಬರುವ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ 2015 ರಿಂದ 2021ನೇ ಸಾಲಿನ ವರೆಗೆ ಬಿಡುಗಡೆಯಾದ ಅನುದಾನವೆಷ್ಟು;	ಹುಬ್ಬಳ್ಳಿ-ಧಾರವಾಡ ಅವಳಿ ನಗರದಲ್ಲಿ ಬರುವ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ 2015 ರಿಂದ 2021ನೇ ಸಾಲಿನ ವರೆಗೆ ಬಿಡುಗಡೆಯಾದ ಅನುದಾನದ ವಿವರಗಳನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.
ಆ)	ಈ ಬಿಡುಗಡೆಯಾದ ಅನುದಾನವನ್ನು ಯಾವ ಯಾವ ಕಾರ್ಯಕ್ರಮಗಳಿಗೆ ಬಳಸಲಾಗುತ್ತಿದೆ;	ಬಿಡುಗಡೆಯಾದ ಅನುದಾನವನ್ನು ಸಿಬ್ಬಂದಿಗಳ ವೇತನ, ಸಂಸ್ಥೆಯ ಸಾಮಾನ್ಯ ವೆಚ್ಚಗಳಿಗೆ, ಗುತ್ತಿಗೆ/ಹೊರಗುತ್ತಿಗೆ ನೌಕರರ ವೇತನಕ್ಕಾಗಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟಪಂಗಡಗಳ ರೋಗಿಗಳಿಗೆ ಉಚಿತ ಚಿಕಿತ್ಸೆ, ಔಷಧೋಪಚಾರಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್, ಪುಸ್ತಕ ಹಾಗೂ ಇತರೇ ಶೈಕ್ಷಣಿಕ ಪರಿಕರಗಳನ್ನು ವಿತರಿಸಲು, ಟ್ರಾಮಾ ಕೇರ್ ವಿಭಾಗಕ್ಕೆ ಉಪಕರಣ ಖರೀದಿಗಾಗಿ, ಜಲ ಸಂಗ್ರಹಗಾರ ನಿರ್ಮಾಣ ಕಾಮಗಾರಿಗೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ ಕಾಮಗಾರಿಗೆ, ಕಾರ್ಡಿಯಾಲಜಿ ವಿಭಾಗಕ್ಕೆ ಉಪಕರಣಗಳ ಖರೀದಿಗೆ, ಕ್ಯಾನ್ಸರ್ ವಿಭಾಗದ ಉನ್ನತೀಕರಣಗೊಳಿಸಲು, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಹಾಸ್ಟೇಲ್ ನಿರ್ಮಾಣ ಕಾಮಗಾರಿಗೆ, ಆಡಿಟೋರಿಯಂ ನವೀಕರಣಕ್ಕಾಗಿ, ಓ.ಟಿ. ಕಾಂಪ್ಲೇಕ್ಸ್ ಕಟ್ಟಡ ನಿರ್ಮಾಣ ಕಾಮಗಾರಿಗೆ ಹಾಗೂ ಆಸ್ಪತ್ರೆಯಲ್ಲಿನ ಟಾಯಲೇಟ್ ಬ್ಲಾಕ್‌ಗಳ ರಿಪೇರಿ ಮತ್ತು ನವೀಕರಣಗಳಿಗಾಗಿ ಅನುದಾನವನ್ನು ಬಳಸಲಾಗಿರುತ್ತದೆ.
ಇ)	ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಮೂಲಭೂತ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ?	ಕಿಮ್ಸ್ ಸಂಸ್ಥೆಯಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹಾಸ್ಟೇಲ್ ನಿರ್ಮಾಣ, ಓ.ಟಿ. ಕಾಂಪ್ಲೆಕ್ಸ್ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ. ಹಾಗೂ ಚಿಕಿತ್ಸೆಗೆ ಬರುವ ರೋಗಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಶೌಚಾಲಯಗಳ ರಿಪೇರಿ ಮತ್ತು ನವೀಕರಣವನ್ನು ಮಾಡಲಾಗಿರುತ್ತದೆ.

ಸಂಖ್ಯೆ: ಎಂಇಡಿ 123 ಎಂಎಂಸಿ 2022

(ಡಾ: ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಅನುಬಂಧ-1

2015-16 ರಿಂದ 2020-21ನೇ ಸಾಲಿನ ವರೆಗೆ ಬಿಡುಗಡೆಯಾದ ಅನುದಾನ ವಿವರ

(ರೂ. ಲಕ್ಷಗಳಲ್ಲಿ)

ಲೆಕ್ಕ-ಶೀರ್ಷಿಕೆ	2015-16	2016-17	2017-18	2018-19	2019-20	2020-21
2210	9429.00	10216.00	11329.00	12568.00	14775.00	18527.33
4210		157.99	1750.00	3500.00	4023.00	250.00
ಒಟ್ಟು	9429.00	10367.99	13079.00	16144.00	18798.00	18777.33